## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ಪಿ.ಸಿ.ಆರ್. ನಂ. 13-2017

ಪ್ರಮಾಣ ಮಾಡಿದ ದಿನಾಂಕ ಃ 31-07-2018

ಸಿ.ಡಬ್ಲ್ಯೂಃ 02

ಸಾಕ್ಷಿದಾರರ ಹೆಸರು ಃ ಭೀಮಾನಾಯ್ಕ

ತಂದೆಯ ಹೆಸರು ಃ ಕತ್ನನಾಯ್ಕ

ವಯಸ್ಸು ಃ 43 ವರ್ಷ

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಬಿತ್ಯಾನ್ ತಾಂಡ

**ಸತ್ಯಾಪನ್ವೇಷಣೆ ಃ**

16-07-2017 ರಂದು ಕೃಷ್ಣನಾಯ್ಕ, ರಾಜು ನಾಯ್ಕ, ಜಯನಾಯ್ಕ, ಶಾಂತಿ ಬಾಯಿ, ಬಾಲಿ ಬಾಯಿ, ಲಲಿತ ಬಾಯಿ, ಮತ್ತು ಅವರವರ ಮಕ್ಕಳೊಂದಿಗೆ ಲಂಬಾಣಿ ನೇಮ್ಯ ನಾಯ್ಕನ ಜೊತೆ ಜಗಳ ವಾಗಿರುತ್ತದೆ. ಸರ್ಕಾರದಿಂದ 2 ಎಕರೆ ಜಮೀನು ಗ್ರಾಮ ಸ್ವರಾಜ್ಯ ಯೋಜನೆ ಅಡಿಯಲ್ಲಿ ಅದರಲ್ಲಿ ಆಶ್ರಯ ಮನೆಗಳನ್ನು ಕಟ್ಟಲು ಸರ್ಕಾರ ಅನುಮೋದನೆಯನ್ನು ನೀಡಿರುವುದಿಲ್ಲ, ಸದರಿ ಜಮೀನಿನಲ್ಲಿ ಇರುವ ರಸ್ತೆಯಲ್ಲಿ ಕೃಷ್ಣನಾಯ್ಕ ದಬ್ಬಾಳಿಕೆಯಿಂದ ಮನೆಯನ್ನು ಕಟ್ಟಿರುತ್ತಾನೆ. ಲಂಬಾಣಿ ನೇಮ್ಯನಾಯ್ಕ ನಮ್ಮ ಟ್ರಾಕ್ಟರ್ ನ ಚಾಲಕನಾಗಿರುತ್ತಾನೆ. ನನಗೆ ಕೃಷ್ಣನಾಯ್ಕ, ರಾಜು ನಾಯ್ಕ ಅವರ ಹೊಲದ ಉಳುಮೆ ಮಾಡಿದ್ದಕ್ಕಾಗಿ 20,000/-, 10,000/- ಮತ್ತು 3,000/- ರೂ ಕೊಡಬೇಕಾಗುತ್ತದೆ. ಆ ಹಣವನ್ನು ಕೊಡಬಾರದು ಎಂಬ ಉದ್ದೇಶದಿಂದ ನನ್ನ ಟ್ರಾಕ್ಟರ್ ನ ಚಾಲಕನಾದ ನೇಮ್ಯನಾಯ್ಕನೊಂದಿಗೆ ವಿನಾಃಕಾರಣ ಜಗಳಕ್ಕೆ ಬಂದಿರುತ್ತಾರೆ. ಜಗಳ ಬಿಡಿಸಲು ಬಂದ ಗೋಪಿನಾಯ್ಕ ನ ಎಡಗೈಗೆ ಶಾಂತಿ ಬಾಯಿ ಕಚ್ಚಿರುತ್ತಾರೆ. ಸದರಿ ದೃಷ್ಣ ನಾಯ್ಕ ರವರು ನೇಮ್ಯನಾಯ್ಕನ ಮಗನ ಮೇಲೆ ಕಲ್ಲು ತೂರಾಟ ಮಾಡಿರುತ್ತಾರೆ. ಎಲ್ಲರೂ ಸೇರಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಹೇಗೆ ಈ ರಸ್ತೆಯಲ್ಲಿ ಅಡ್ಡಾಡುತ್ತಿಯಾ ಎಂದು ಹೇಳಿ ನನ್ನ ಮನೆಗೆ ಹೋಗುವ ರಸ್ತೆಯನ್ನು ಮುಚ್ಚಿರುತ್ತಾರೆ ಹಾಗೂ ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ. ನನಗೆ ಹಾಗೂ ಸಾರ್ವಜನಿಕರಿಗೆ ಸದರಿ ರಸ್ತೆಯಲ್ಲಿ ಓಡಾಡಲು ಅನುವು ಮಾಡಿಕೊಟ್ಟು, ಆರೋಪಿಗಳ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಲು ವಿನಂತಿಸಿಕೊಳ್ಳುತ್ತೇನೆ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೆಚ್ ಬಿ ಹಳ್ಳಿ.